# ಉಕ್ರೇನ್‌ಗೆ ಭೀಷ್ಮ ಕ್ಯೂಬ್‌ಗಳನ್ನು ಉಡುಗೊರೆಯಾಗಿ ನೀಡಿದ ಪ್ರಧಾನಿ

ಆಗಸ್ಟ್ 23, 2024

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಉಕ್ರೇನ್ ಸರ್ಕಾರಕ್ಕೆ ನಾಲ್ಕು ಭೀಷ್ಮ (ಸಹಯೋಗ್ ಹಿತಾ ಮತ್ತು ಮೈತ್ರಿಗಾಗಿ ಭಾರತ್ ಹೆಲ್ತ್ ಇನಿಶಿಯೇಟಿವ್) ಕ್ಯೂಬ್‌ಗಳನ್ನು ಉಡುಗೊರೆಯಾಗಿ ನೀಡಿದರು. ಉಕ್ರೇನ್ ಅಧ್ಯಕ್ಷ ಘನತೆವೆತ್ತ ಶ್ರೀ ವೊಲೊಡಿಮಿರ್ ಜೆಲೆನ್ಸ್ಕಿ ಅವರು ಮಾನವೀಯ ನೆರವಿಗಾಗಿ ಪ್ರಧಾನಮಂತ್ರಿಯವರಿಗೆ ಧನ್ಯವಾದ ಅರ್ಪಿಸಿದರು. ಕ್ಯೂಬ್‌ಗಳು ಗಾಯಗೊಂಡವರಿಗೆ ತ್ವರಿತ ಚಿಕಿತ್ಸೆ ನೀಡಲು ಸಹಾಯ ಮಾಡುತ್ತದೆ ಮತ್ತು ಅಮೂಲ್ಯ ಜೀವಗಳನ್ನು ಉಳಿಸಲು ಕೊಡುಗೆ ನೀಡುತ್ತದೆ.

2. ಪ್ರತಿ ಭೀಷ್ಮ ಕ್ಯೂಬ್ ಎಲ್ಲಾ ರೀತಿಯ ಗಾಯಗಳು ಮತ್ತು ವೈದ್ಯಕೀಯ ಪರಿಸ್ಥಿತಿಗಳಿಗೆ ಮೊದಲ ಸಾಲಿನ ಆರೈಕೆಗಾಗಿ ಔಷಧಿಗಳು ಮತ್ತು ಸಲಕರಣೆಗಳನ್ನು ಹೊಂದಿದೆ. ಇದು ದಿನಕ್ಕೆ 10ರಿಂದ 15 ಮೂಲಭೂತ ಶಸ್ತ್ರಚಿಕಿತ್ಸೆಗಳನ್ನು ನಿರ್ವಹಿಸಬಲ್ಲ ಮೂಲ ಶಸ್ತ್ರಚಿಕಿತ್ಸಾ ಕೊಠಡಿಗೆ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಸಹ ಒಳಗೊಂಡಿದೆ. ಆಘಾತ, ರಕ್ತಸ್ರಾವ, ಸುಟ್ಟಗಾಯಗಳು, ಮುರಿತ ಮುಂತಾದ ತುರ್ತು ಸಂದರ್ಭಗಳಲ್ಲಿ ವಿವಿಧ ಸ್ವರೂಪದ ಸುಮಾರು 200 ಪ್ರಕರಣಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಕ್ಯೂಬ್ ಹೊಂದಿದೆ. ಇದು ತನ್ನದೇ ಆದ ಶಕ್ತಿ ಮತ್ತು ಆಮ್ಲಜನಕವನ್ನು ಸೀಮಿತ ಪ್ರಮಾಣದಲ್ಲಿ ಉತ್ಪಾದಿಸಬಹುದು. ಕ್ಯೂಬ್ ಅನ್ನು ನಿರ್ವಹಿಸಲು ಉಕ್ರೇನಿಯನ್ ಭಾಗಕ್ಕೆ ಆರಂಭಿಕ ತರಬೇತಿ ನೀಡಲು ಭಾರತದ ತಜ್ಞರ ತಂಡವನ್ನು ನಿಯೋಜಿಸಲಾಗಿದೆ.

3. ಇದು ಉಕ್ರೇನ್‌ಗೆ ಮಾನವೀಯ ನೆರವು ನೀಡುವ ಭಾರತದ ನಿರಂತರ ಬದ್ಧತೆಯನ್ನು ಒತ್ತಿಹೇಳುತ್ತದೆ.

**ಕೈವ್**
**ಆಗಸ್ಟ್ 23, 2024**